# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರಿ ವಾರ್ಡ್ ಕಛೇರಿ ಬೆಂಗಳೂರು

**ದಿನಾಂಕ: 17.09.2022 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಪ್ರಕಾಶ್. ಎನ್. ಎಸ್ – ಸಹಾಯಕ ಅಭಿಯಂತರರು
3. ಶ್ರೀ. ನವೀನ್ ಕುಮಾರ್. ಎಸ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ಕಿಯೋನಿಕ್ಸ್)
4. ಶ್ರೀ. ಕಲ್ಯಾಣ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ)
5. ಶ್ರೀ. ದಿನೇಶ್ – ಕಂದಾಯ ಪರಿವೀಕ್ಷಕರು
6. ಶ್ರೀ. ಸಯ್ಯದ್ – ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ)
7. ಘನತ್ಯಾಜ್ಯ ವಿಲೇವಾರಿ ಸೂಪರ್‌ವೈಸರ್‌ಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಬನಶಂಕರಿ 2ನೇ ಹಂತದ ನಿವಾಸಿಗಳ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

*********

ಮಾನ್ಯ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ ಯವರು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು, ಸ್ಥಳೀಯ ನಾಗರೀಕರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು.

ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರಿ ವಾರ್ಡ್‌ನ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರಿಗೆ ಈ ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಗಿರುವ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಚಾರಿಸಲಾಗಿ ನಿಗಧಿತ ಅವಧಿಯೊಳಗೆ ಕೆಲಸ ಕಾರ್ಯಗಳನ್ನು ಅಧಿಕಾರಿಗಳು ಜರೂರಾಗಿ ಕ್ರಮಕೈಗೊಳ್ಳುವಂತೆ ಸೂಚಿಸಿ ಸಭೆ ಸೇರಿರುವ ಉದ್ದೇಶ ಮತ್ತು ಮಹತ್ವವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಲಾಯಿತು.

ಹಾಗೂ ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಮಾತನಾಡುತ್ತಾ ಸಂಸ್ಥೆ ವತಿಯಿಂದ ಸಲ್ಲಿಸಿರುವ ದೂರುಗಳ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿರುವಂತೆ ಕೆಲಸಕಾರ್ಯಗಳನ್ನು ಜರೂರಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದರು.

ಮುಂದುವರೆದು, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. **ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೊಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ.**

- ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಸಣ್ಣ ಪುಟ್ಟ ಅಂಗಡಿಗಳಿದ್ದು ವಾಹನ ನಿಲುಗಡೆಯಿಂದಾಗಿ ಹಾಗೂ ವಾರಸುದಾರರಿಲ್ಲದ ವಾಹನಗಳು ಪಾದಚಾರಿ ಮಾರ್ಗದ ಮೇಲೆ ನಿಂತಿದ್ದು ಸಾರ್ವಜನಿಕರಿಗೆ ಪಾದಚಾರಿ ಮಾರ್ಗದಲ್ಲಿ ಓಡಾಡಲು ತೊಂದರೆಯುಂಟಾಗಿರುತ್ತದೆ. ಹಾಗೂ ವಾಹನ ಸಂಚಾರ ಅಡ್ಡಿಪಡಿಸಿರುವುದಾಗಿ ಸಾರ್ವಜನಿಕರು ತಿಳಿಸಿದರು.

ಮು.ತಿ.ನೋ

- ಬೆಂಗಳೂರು ಇಂಟರ್‌ನ್ಯಾಷನಲ್ ಶಾಲೆ ಹತ್ತಿರ ಟ್ರಾಫಿಕ್ ಜಾಮ್ ಉಂಟಾಗುತ್ತಿರುತ್ತದೆ. ಅದನ್ನು ಕಡಿಮೆ ಮಾಡುವಂತೆ ಸಾರ್ವಜನಿಕರು ತಿಳಿಸಿದರು.
- ಕಾವೇರಿನಗರ ಮತ್ತು 24ನೇ ಎ ಅಡ್ಡರಸ್ತೆ ಉರ್ದು ಶಾಲೆ ಹತ್ತಿರ ಕಳ್ಳರ ಕಾಟ ಜಾಸ್ತಿಯಾಗಿರುತ್ತದೆ. ಆದ್ದರಿಂದ ಪೊಲೀಸ್ ಬೀಟ್ ಹಾಕಲು ಸಾರ್ವಜನಿಕರು ಕೋರಿದರು.
- ವಾರ್ಡ್ ವ್ಯಾಪ್ತಿಯ ಉಮಾಮಹೇಶ್ವರಿ ಪಾರ್ಕ್, ಕರೀಸಂದ್ರ ಸಮುದಾಯ ಭವನ ಹಾಗೂ ಬನಶಂಕರಿ ಸ್ಮಶಾನಗಳಲ್ಲಿ ಕಿಡಿಗೇಡಿಗಳು ಗಾಂಜಾ ಸೇವನೆ ಮಾಡುತ್ತಿರುತ್ತಾರೆ. ಸದರಿ ಕಿಡಿಗೇಡಿಗಳನ್ನು ಪೊಲೀಸರು ಬಂದಿಸಬೇಕೆಂದು ಸಾರ್ವಜನಿಕರು ಕೋರಿದರು.

ಕ್ರಮ: <u>ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್</u>

2. <u>ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.</u>

- ಜಯನಗರ 7ನೇ ಬ್ಲಾಕ್‌ನ 8ನೇ ಅಡ್ಡರಸ್ತೆಯಲ್ಲಿ ಚರಂಡಿಯ ಮೇಲೆ ದೊಡ್ಡದಾದ ಮರವೊಂದು ಬೆಳೆದಿದ್ದು ಸದರಿ ಮರದ ಬೇರು ಚರಂಡಿಯ ತುಂಬ ಆವರಿಸಿದ್ದು ನೀರು ಸರಾಗವಾಗಿ ಹರಿಯಲು ತೊಂದರೆಯಾಗಿ ಚರಂಡಿಯಲ್ಲಿ ಮಣ್ಣು ತುಂಬಿರುತ್ತದೆ. ಆದ್ದರಿಂದ ಸದರಿ ಮರವನ್ನು ತೆರವುಗೊಳಿಸಿಕೊಡಲು ಸಾರ್ವಜನಿಕರು ಕೋರಿದರು.

ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ-ಬಿಬಿಎಂಪಿ)

- ವಾರ್ಡ್ ವ್ಯಾಪ್ತಿಯ ಕನಕಪುರ ಮುಖ್ಯರಸ್ತೆ ಹಾಗೂ ಕೆ.ಆರ್ ರಸ್ತೆಯಲ್ಲಿ ರಸ್ತೆಗುಂಡಿಗಳು ಹಾಗೂ ಇತರೆ ಸಮಸ್ಯೆಗಳನ್ನು ಖುದ್ದು ಹಾಜರಾಗಿ ಬಗೆಹರಿಸಬೇಕೆಂದು ಸಾರ್ವಜನಿಕರು ವಿನಂತಿಸಿದರು.

ಕ್ರಮ: ಕಾರ್ಯಪಾಲಕ ಅಭಿಯಂತರರು(ಯೋಜನೆ -ಕೇಂದ್ರ) ವಿಭಾಗ

- ವಾರ್ಡ್ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಉಂಟಾಗುತ್ತಿರುವ ರಸ್ತೆಗುಂಡಿಗಳನ್ನು ಆಗಿಂದಾಗ್ಗೆ ಮುಚ್ಚಲಾಗುತ್ತಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.

3. <u>ಮಾನ್ಯ ಅಧ್ಯಕ್ಷರ ಸೂಚನೆಯಂತೆ ಇನ್ನಿತರೆ ವಿಷಯಗಳು.</u>

- ಒಂಟಿ ಮನೆಯ ಮನವಿ ಸಲ್ಲಿಸುವ ಸಂಬಂಧ ಅಂತರ್ಜಾಲವು ನಿಷ್ಕ್ರಿಯವಾಗಿರುತ್ತದೆ. ಸದರಿ ವೆಬ್‌ಸೈಟ್‌ನ್ನು ಕ್ರಿಯಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದರು.
- 2023ನೇ ಸಾಲಿನ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ವಾರ್ಡ್ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ನಮೂನೆ-6, ತೆಗೆದುಹಾಕಲು ನಮೂನೆ-7 ಮತ್ತು ತಿದ್ದುಪಡಿಗೊಳಿಸಲು ನಮೂನೆ-8 ರಲ್ಲಿ ಕ್ರಮವಹಿಸಲು **ಹಾಗೂ ಮತದಾರರ ಗುರುತಿನ ಚೀಟಿಗೆ-ಆಧಾರ್ ಜೋಡಣೆ** ಮಾಡಲು ನಡೆಯುತ್ತಿರುವ ಕಾರ್ಯವು ಮಂದಗತಿಯಲ್ಲಿ ಸಾಗುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ರೆಸ್ಸಿಡೆಂಷಿಯಲ್ / ಅಪಾರ್ಟ್‌ಮೆಂಟ್ ವೆಲ್ಫೇರ್ ಅಸೋಸಿಯೇಷನ್ ಹಾಗೂ ಎನ್.ಜಿ.ಒ ಗಳ ಮುಖಾಂತರ ಸೂಕ್ತ ಅರಿವು ಮೂಡಿಸಿ, ಜಾಗೃತಿ ಅಭಿಯಾನ ಹಮ್ಮಿಕೊಂಡು ತಿಳಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ವಾರ್ಡ್ ಸಂಖ್ಯೆ 201

ಅಧ್ಯಕ್ಷರು/ಕಂದಾಯ ಅಧಿಕಾರಿ
ಜಾಮರಾಜಪೇಟೆ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ